ದಿನಾಂಕ 13 ನೇ ಜುಲೈ, 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ :-

ನಾನು ಮಣಿಕಂಠ ವಿರುದ್ಧ ಸಲ್ಲಿಸಿದ್ದ ಒಂದು ಪ್ರಕರಣ ರೂ 70 ಸಾವಿರಕ್ಕೆ ರಾಜಿ ಆಗಿದೆ ಎನ್ನುತ್ತಾರೆ. ನನಗೆ ಆರೋಪಿ ದೂರದ ಸಂಬಂಧಿ ಆಗಿರುತ್ತಾರೆ ಹಾಗೂ ಆರೋಪಿ ಮತ್ತು ಅವರ ಪತಿ ವ್ಯವಸಾಯ ಮಾಡುತ್ತಾರೆ. ಆರೋಪಿ ಮಕ್ಕಳು ಓದುತ್ತಿದ್ದಾರೆ. ಆರೋಪಿಗೆ 6 ಎಕರೆ ಆಸ್ತಿ ಇದೆ ಅವರು ವ್ಯವಸಾಯ ಹೊರತುಪಡಿಸಿ ಬೇರೆ ಕೆಲಸ ಮಾಡುತ್ತಿಲ್ಲ ಎಂದರೆ ಸರಿ. ನಾನು ವ್ಯವಸಾಯ ಹಾಗೂ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತೇನೆ. ನನಗೆ 4 ಎಕರೆ ಜಮೀನು ಇದೆ. 10-15 ವರ್ಷಗಳಿಂದ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದೇನೆ.

2020-21 ರಲ್ಲಿ ನನ್ನ ವಾರ್ಷಿಕ ಆದಾಯ 7 ಲಕ್ಷ ಇತ್ತು. ಜನವರಿಯಲ್ಲಿ ಕಾಫಿ ಬೆಳೆ ತೆಗೆಯುವುದನ್ನು ಪ್ರಾರಂಭಿಸುತ್ತೇವೆ. ಜನವರಿಯಲ್ಲೆ ಕಾಫಿ ಮಾರಾಟ ಮಾಡುತ್ತೇವೆ. ನಾವು ಕಾಫಿ ಮಾರಾಟದಿಂದ ಬಂದ ಹಣವನ್ನು ಬ್ಯಾಂಕ್ ಗೆ ಹಾಕುವುದಿಲ್ಲ ಮನೆಯಲ್ಲೆ ಇಟ್ಟುಕೊಳ್ಳುತ್ತೇವೆ. ಪೊನ್ನಂಪೇಟೆಯ ಕಾಫಿ ಬಿನು ರವರಿಗೆ 2020 ರಲ್ಲಿ 150 ಚೀಲ ಕಾಫಿ ಮಾರಾಟ ಮಾಡಿರುತ್ತೇನೆ. ರೂ 3500/- ಒಂದು ಚೀಲ ಕಾಫಿಗೆ ಬೆಲೆ ಇತ್ತು. ನಮ್ಮ ಕುಟುಂಬ ನಿರ್ವಹಣೆಗೆ ಕಾಫಿ ವ್ಯವಹಾರ ಹೊರತುಪಡಿಸಿ ಹಂದಿ ಸಾಕಾಣೆ, ಹೈನುಗಾರಿಕೆ ಇದೆ ಎನ್ನುತ್ತಾರೆ. ಕಾಫಿ ಮಾರಾಟದಿಂದ ಬಂದ ಹಣವನ್ನು ಆರೋಪಿಗೆ ನೀಡಿರುತ್ತೇನೆ. ಜನವರಿಯಲ್ಲೆ ಕಾಫಿ ಮಾರಾಟ ಮಾಡುತ್ತೇನೆ ದಿನಾಂಕ ನೆನಪಿಲ್ಲ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಲಾಗಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರ ದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ) sd/-

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.